ಕಾವೇರಿ ವಿವಾದದ ಸಂದರ್ಭದಲ್ಲಿ ತಮಿಳುನಾಡಿನಿಂದ ಕರ್ನಾಟಕಕ್ಕೆ ವಲಸೆ ಬಂದಿರುವ ಕನ್ನಡಿಗರ ಸಂಖ್ಯೆ.

392 (555) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಕಾವೇರಿ ವಿವಾದದ ಸಂದರ್ಭದಲ್ಲಿ ನಡೆದ ಹಿಂಸಾಚಾರದಿಂದಾಗಿ ತಮಿಳು ನಾಡಿನಿಂದ ಕರ್ನಾಟಕಕ್ಕೆ ಬಂದಿರುವ ಕನ್ನಡಿಗರ ಸಂಖ್ಯೆ ಎಷ್ಟು.

ಆ) ಇವರುಗಳಿಗೆ ಈಗ ಎಲ್ಲಿ ವಸತಿ ಹಾಗೂ ಇತರ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಇ) ಈ ರೀತಿ ವಲಸೆ ಬಂದಿರುವ ಕನ್ನಡಿಗರಿಗೆ ಅನುಕೂಲ ಮಾಡಿಕೊಡುವಲ್ಲಿ ಕೆಲವು ಕಡೆ ಅಧಿಕಾರಿಗಳು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು):-

ಅ) ಒಟ್ಟು 6,076

ಆ) ತಾತ್ಕಾಲಿಕವಾಗಿ ಮೈಸೂರು ಜಿಲ್ಲೆಯ ಬಿಸಲುವಾಡಿ, ಚಾಮರಾಜನಗರ, ಕೊಳ್ಳೆಗಾಲ, ಹೆಚ್.ಡಿ. ಕೋಟೆಗಳಲ್ಲಿ ಈ ಸಂತ್ರಸ್ತರಿಗಾಗಿ ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿತ್ತು. ಅವರಿಗೆ ಊಟ ಮತ್ತು ಬಟ್ಟೆಬರೆಗಳನ್ನು ಒದಗಿಸಲಾಗಿತ್ತು.

ಇ) ಇಂಥ ಯಾವ ಪ್ರಕರಣಗಳೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮೂಲೆ ನಿವೇಶನಗಳನ್ನು ಹರಾಜು ಮಾಡಿರುವ ಬಗ್ಗೆ.

395 (559) ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 1989-90, 1990-91 ಹಾಗೂ 1991-92ರ ಜನವರಿ 31ರವರೆಗೆ ಎಷ್ಟು ಮೂಲೆ ನಿವೇಶನಗಳನ್ನು ಹರಾಜು ಮಾಡಿದೆ?

ಆ) ಈ ಹರಾಜಿನಿಂದ ಪ್ರಾಧಿಕಾರಕ್ಕೆ ಬಂದ ಹಣ ಎಷ್ಟು?

ಇ) ಈ ಹಣವನ್ನು ಯಾವ ಕಾರ್ಯಗಳಿಗಾಗಿ ಉಪಯೋಗ ಮಾಡಲಾಗುತ್ತಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು.):-

ಅ) 1989-90 - 641
1990-91 - 797
1991-92 - 520
(31-1-92ರವರೆಗೆ) 1958

ಆ) ಹರಾಜಿನಿಂದ ಪ್ರಾಧಿಕಾರಕ್ಕೆ ಬಂದ ಹಣ ರೂ. 62,54,19,584-00

ಇ) ಈ ಹಣವನ್ನು ಭೂಮಿ ಮೂಲೀಕರಿಗೆ ನ್ಯಾಯಾಲಯಗಳ ಆದೇಶದಂತೆ ಪರಿಹಾರ ಧನ ನೀಡುವುದಕ್ಕೆ ಪ್ರಾಧಿಕಾರದ ಬಡಾವಣೆಗಳಲ್ಲಿ ಮೂಲ ಸೌಕರ್ಯಗಳು ಒದಗಿಸುವುದು ಮತ್ತು ಇತರೆ ಅಭಿವೃದ್ಧಿ ಕಾರ್ಯಗಳಿಗಾಗಿ ಉಪಯೋಗ ಮಾಡಲಾಗುತ್ತಿದೆ.